# ಪಾತ್ರದಲ್ಲಿ ಎಲ್ಲೂ ನಾನು ಕಾಣಬಾರದು

## ಸಾಗರ್ ಬಿಳಿಗೌಡ
### ಉದಯ ಟೀವಿಯ "ಮನಸಾರೆ'ಯ ಯುವರಾಜ್

◆ **ನಟನೆಯನ್ನು ವೃತ್ತಿಯಾಗಿ ತೆಗೆದುಕೊಂಡಿದ್ದು ಹೇಗೆ?**

ಎಂಬಿಎಯನ್ನು ಲಂಡನ್ನಿನ ಲಾಂಗ್‌ಟನ್‌ನಲ್ಲಿ ಮಾಡಿದೆ. ನಂತರ ಬೆಂಗಳೂರಿನಲ್ಲಿಯೇ ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸಕ್ಕೆ ಸೇರಿದೆ. ಒಳ್ಳೆಯ ಸಂಪಾದನೆಯನ್ನೂ ಮಾಡುತ್ತಿದ್ದೆ. ಇನ್‌ವೆಸ್ಟ್‌ಮೆಂಟ್ ಮತ್ತು ತೆರಿಗೆಗೆ ಸಂಬಂಧಿಸಿದಂತೆ ಕನ್ಸಲ್ಟಂಟ್ ಆಗಬೇಕು ಎನ್ನುವ ದೃಷ್ಟಿಯಿಂದ ಉನ್ನತ ಶಿಕ್ಷಣವನ್ನು ಮಾಡಿದ್ದೆ. ಅಲ್ಲಿ ನನಗೊಬ್ಬ ಸ್ನೇಹಿತ ಸಿಕ್ಕ. ಆತ ಫಿಲ್ಮ್ ಮೇಕಿಂಗ್ ಅಧ್ಯಯನ ಮಾಡುತ್ತಿದ್ದ. ಅವನು ಭಾರತಕ್ಕೆ ಮೊದಲಬಾರಿಗೆ ಭೇಟಿ ನೀಡಿದ. ಅವನಿಗೆ ಸಿನಿಮಾ ಮಾಡುವ ಆಸೆ ಉತ್ಕಟವಾಗಿತ್ತು. ಅವನಿಗೆ ಸಹಾಯ ಮಾಡಲು ನಾನು ಮುಂದಾದೆ. ಗೆಳೆಯನ ಸಾಕ್ಷ್ಯಚಿತ್ರಕ್ಕೆ ಬಣ್ಣ ಹಚ್ಚಿದೆ. ಮೊದಲಬಾರಿಗೆ ಕ್ಯಾಮೆರಾ ಎದುರಿಸಿದೆ. ತುಂಬ ಕೆಟ್ಟದಾಗಿ ಬಂದಿದೆ ಎಂದು ನಮಗೆ ಅನಿಸಿತು. ಅಭಿಲಾಷ್ ಅಂತ ಮತ್ತೊಬ್ಬ ಗೆಳೆಯ ಈ ಸಂದರ್ಭದಲ್ಲಿ ನನ್ನ ನೆರವಿಗೆ ಬಂದ. ವಿಡಿಯೊ ಟೆಸ್ಟ್ ಶೂಟ್ ಅವನಿಗೆ ತೋರಿಸಿದಾಗ ನೀನು ಮಾಡಬಹುದು. ಆದರೆ ಸ್ವಲ್ಪ ತಯಾರಿಬೇಕು ಎಂಬ ಸಲಹೆ ನೀಡಿದ. ಟಿ.ಎಸ್. ನಾಗಾಭರಣ ನಟನಾ ಕಾರ್ಯಾಗಾರ ಮಾಡುತ್ತಿದ್ದಾರೆ ಸೇರಿಕೊ ಎಂದು ಹೇಳಿದ. ಮಾತ್ರವಲ್ಲ, ಅವರಿಗೆ ನಾಗಾಭರಣ ಪರಿಚಯ ಇದ್ದರು. ಒಂದು ದಿನ ಆತ ನೇರವಾಗಿ ಅವರ ಮನೆಗೆ ಕರೆದುಕೊಂಡು ಹೋದ. ಅಲ್ಲಿ ನನಗೆ ಅಭಿನಯದ ಒಲವನ್ನು ಪರೀಕ್ಷಿಸಿದರು. ವಾರಾಂತ್ಯದ ಕಾರ್ಯಾಗಾರ ಆರಂಭವಾಯಿತು. ಪ್ರಮುಖ ನಿರ್ದೇಶಕರು ನಟರು ತರಗತಿಯನ್ನು ತೆಗೆದುಕೊಂಡು ಅಭಿನಯದ ಮೂಲತತ್ವಗಳನ್ನು ಹೇಳಿಕೊಟ್ಟರು. ಅದರ ಜೊತೆ ದೇಹ ಭಾಷೆಯನ್ನೂ ತಿದ್ದಿದರು. ಪಾತ್ರದ ಪರಕಾಯ ಪ್ರವೇಶ ಮಾಡುವ ಬಗೆ ಅದಕ್ಕೆ ಬೇಕಾಗುವ ಸಿದ್ಧತೆ ಮತ್ತು ಸುತ್ತಾಟವನ್ನೂ ತಿಳಿಸುತ್ತಿದ್ದರು.

◆ **ನಟರಾಗಿ ರೂಪುಗೊಳ್ಳಲು ಅಷ್ಟಾದರೆ ಸಾಕಾಗಬಹುದಾ?**

ಖಂಡಿತ ಇಲ್ಲ. ಇನ್ನೂ ಕಲಿಯಬೇಕು ಎನ್ನುವ ಹಸಿವು ನನಗೆ ಆಗ ಹೆಚ್ಚಾಯಿತು. ಆ ಕಾರ್ಯಾಗಾರದಲ್ಲಿ ರಂಗಕರ್ಮಿ ಕೃಷ್ಣಮೂರ್ತಿ ಸರ್ ತರಗತಿಯನ್ನು ತೆಗೆದುಕೊಂಡಿದ್ದರು. ಅವರು ನನಗೆ ಬೇರೆಯ ದಿಕ್ಕನ್ನೇ ತೆರೆದು ತೋರಿಸಿದರು. ಆರು ತಿಂಗಳಷ್ಟರಲ್ಲಿ ನನಗೆ ಭರವಸೆಯೂ ಮೂಡಿತು. ನಾನಾಗ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಅದಕ್ಕೆ ರಾಜೀನಾಮೆ ನೀಡಿದೆ. ಅಭಿನಯವನ್ನು ಮತ್ತಷ್ಟು ಕಲಿಯಲು ಆರಂಭಿಸಿದೆ. ಕೃಷ್ಣಮೂರ್ತಿ ಸರ್ ನಾಟಕದ ಬಗ್ಗೆ ಹೇಳಿಕೊಡಲು ಶುರುಮಾಡಿದರು. ರೇಡಿಯೊ ನಾಟಕಗಳು ಸೇರಿದಂತೆ ರಂಗದ ಮೇಲಿನ ನಾಟಕಗಳ ಹತ್ತಾರು ಆಯಾಮ ಮತ್ತು ಪಾತ್ರ ಪ್ರತಿನಿಧಿಸುವ ಬಗ್ಗೆ ಹೇಳಿಕೊಟ್ಟರು.

ಆ ನಂತರ ಕ್ಯಾಮೆರಾ ಎದುರಿಸುವ ಬಗ್ಗೆ ಮೂರು ನಾಲ್ಕು ತಿಂಗಳು ಅಧ್ಯಯನ ಮಾಡಿದೆ. ಪಾತ್ರ, ಸೀನ್, ಸ್ಕ್ರಿಪ್ಟ್ ಓದುವುದು, ಉಸಿರು ಮತ್ತು ಧ್ವನಿಯ ಏರಿಳಿತವನ್ನು ಹೇಳಿಕೊಟ್ಟರು. ನಂತರ ಕಲಿಯುವುದು ತುಂಬ ಇದೆ ಅನ್ನಲು ಶುರುವಾಯಿತು. ನನ್ನ ಸಂಪಾದನೆಯಲ್ಲಿ ಉಳಿಸಿದ ಸ್ವಲ್ಪ ಹಣ ಇತ್ತು. ನಾನು ಇಂಗ್ಲೆಂಡ್‌ನಲ್ಲಿ ಅಡ್ವಾನ್ಸ್ ಆಕ್ಟಿಂಗ್ ಮತ್ತು ಫಿಲ್ಮ್ ಮೇಕಿಂಗ್ ಅಲ್ಪಾವಧಿ ಕೋರ್ಸ್ ಮಾಡಿದೆ. ಆ ನಂತರ ಆಡಿಷನ್ ನೀಡಲು ಶುರುಮಾಡಿದೆ. ನೂರಾರು ಆಡಿಷನ್ ಎದುರಿಸಿದೆ. ಮೊದಲು ಕಲರ್ಸ್ ಸೂಪರ್‌ನ 'ತುಳಸಿದಳ'ಕ್ಕೆ ಫೋನ್ ಬಂತು. ಅಷ್ಟರಲ್ಲಾಗಲೇ ಕಲರ್ಸ್ ಕನ್ನಡದಲ್ಲಿ 'ಕಿನ್ನರಿ' ಪ್ರಸಾರ ಆಗುತ್ತಿತ್ತು. ಒಂದು ಪಾತ್ರ ಇದೆ ನೀವು ಬೇಕು ಎಂದು ನಿರ್ಮಾಪಕ ರಾಜ್‌ಶೆಟ್ಟಿ ಕರೆದರು.

◆ **ಸುಮ್ಮನೆ ಇರುವುದು ಬಿಟ್ಟು ಇರುವೆ ಬಿಟ್ಟುಕೊಂಡೆ ಅಂತ ಅನ್ನಿಸಿದ್ದು ಇದೆಯಾ?**

ಅನ್ನಿಸಿದೆ. ಆದರೆ ಆ ಬಗ್ಗೆ ನೊಂದುಕೊಳ್ಳುವಷ್ಟು ಪುರುಸೊತ್ತು ಇಲ್ಲದಷ್ಟು ಮುಂದೆ ಹೋಗಿದ್ದೆ. ನನ್ನ ಮಾತೃಭಾಷೆ ಕನ್ನಡ, ನಮ್ಮ ಮೂಲ ಮಂಡ್ಯ. ಬೆಳೆದದ್ದು ಮಾತ್ರ ಬೆಂಗಳೂರು. ಆದರೂ ಕಾನ್ವೆಂಟ್ ಶಿಕ್ಷಣದಿಂದ ಕನ್ನಡವನ್ನೇ ಓದಿರಲಿಲ್ಲ. ಹೀಗಿರುವಾಗ ಸ್ಕ್ರಿಪ್ಟ್ ಹೇಗೆ ಓದುವುದು ಎನ್ನುವ ಸಮಸ್ಯೆ ಎದುರಾಯಿತು. ಅದಕ್ಕೆ ನನ್ನ ಗೆಳೆಯನಿಗೆ ಮೊಬೈಲ್‌ನಲ್ಲಿ ಸ್ಕ್ರಿಪ್ಟ್ ಫೋಟೊ ಕಳಿಸುತ್ತಿದ್ದೆ. ಅದನ್ನು ಅವನು ಓದಿ ರೆಕಾರ್ಡ್ ಮಾಡಿ ಕಳುಹಿಸುತ್ತಿದ್ದ. ಕೇಳಿ ಕೇಳಿ ಆಡಿಷನ್ ನೀಡುತ್ತಿದ್ದೆ. ಆಮೇಲೆ ಇದು ಸರಿ ಹೋಗುವುದಿಲ್ಲ ಎಂದು ಕನ್ನಡವನ್ನು ಕಲಿಯಲು ಆರಂಭಿಸಿದೆ. ಟ್ಯೂಟರ್ ಮೂಲಕ ಮೂರು ತಿಂಗಳಲ್ಲಿ ಕನ್ನಡ ಓದು ಬರಹವನ್ನು ಒಂದು ಮಟ್ಟಿಗೆ ಕಲಿತೆ. ಉಚ್ಚರಣೆಯ ಸಮಸ್ಯೆ ನನಗೆ ಇರಲಿಲ್ಲ. ಆಡಿಷನ್‌ಗೆ ಹೋದ ಸಂದರ್ಭದಲ್ಲಿ ನಿಷ್ಠೂರವಾಗಿ ವಿಮರ್ಶೆಗೆ ತುತ್ತಾಗುತ್ತಿದ್ದೆ. ಒಳ್ಳೆಯ ಸಂಬಳದ ಕೆಲಸ ಬಿಟ್ಟು ಒಂದು ಹೀಗೆನಿಸಿಕೊಳ್ಳಬೇಕಾಯಿತಲ್ಲ ಎಂದು ಒಂದು ಕ್ಷಣ ಅನ್ನಿಸುತ್ತಿತ್ತು. ತಕ್ಷಣ ಅದನ್ನು ತಲೆಗೆ ಹಚ್ಚಿಕೊಳ್ಳದೆ ಮತ್ತೊಂದು ಆಡಿಷನ್ ನೀಡಲು ಹೊರಡುತ್ತಿದ್ದೆ. ಅದಾವುದೂ ಅವಮಾನ ಅಂತ ಅನ್ನಿಸಲೇ ಇಲ್ಲ. ಅವರ ಅಭಿಪ್ರಾಯ ಅದು ಎಂದು ಭಾವಿಸುತ್ತಿದ್ದೆ. ಸಣ್ಣ ಸಣ್ಣ ವಿಷಯಕ್ಕೆ ತಿರಸ್ಕೃತ ಆಗುತ್ತಿದ್ದೆ. ಕಾರಣ ಕೇಳಿದರೆ ಈಗಲೂ ನಗು ಬರುತ್ತದೆ. 'ನೀನು ತುಂಬ ಬೆಳ್ಳಗಿದ್ದೀಯಾ? ನಿನ್ನ ಕಣ್ಣು ಸ್ವಲ್ಪ ಹೊಂದಾಣಿಕೆ ಆಗುತ್ತಿಲ್ಲ' ಅವರು ಸೃಷ್ಟಿಸಿದ ಪಾತ್ರಕ್ಕೆ ತಾಂತ್ರಿಕವಾಗಿ ನಾನು ಹೊಂದಾಣಿಕೆ ಆಗುತ್ತಿರಲಿಲ್ಲ ಎಂದೆನಿಸಿ ಸುಮ್ಮನಾಗುತ್ತಿದೆ.

◆ **ಸಿನಿಮಾ– ಧಾರಾವಾಹಿ ಪಾತ್ರ ಅಂದರೆ ಹೇಗಿರಬೇಕು?**

ಯುವರಾಜ್ ಪಾತ್ರ ಇಷ್ಟ ಆಯ್ತು. ನಾನು ಹಾಗೆಯೇ ಪಾತ್ರವೂ ಇದೆ ಎಂದೆನಿಸುತ್ತದೆ. 'ಕಿನ್ನರಿ' ನಂದು ಹೀಗಿರಲಿಲ್ಲ. ನಂದು ಓದಿಲ್ಲ, ವ್ಯಾವಹಾರಿಕ ಜ್ಞಾನ ಇಲ್ಲ ತುಂಬ ಮುಗ್ಧನಾಗಿದ್ದಾನೆ. ಆದರೆ ಇಲ್ಲಿ ನಾನು ಮತ್ತೊಂದು ಪಾತ್ರವಾಗಿ ನಟಿಸುತ್ತಿದ್ದೇನೆ ಎಂದು ಅನಿಸದಷ್ಟು ಸರಳವಾಗಿದೆ. ನನಗೆ ತುಂಬ ತದ್ವಿರುದ್ಧ ಪಾತ್ರ ಅದಾಗಿತ್ತು. ನಿಜಕ್ಕೂ 'ನಾನು' ಎಲ್ಲೂ ಪಾತ್ರದಲ್ಲಿ ಕಾಣಿಸಿಕೊಳ್ಳಬಾರದು ಅಂತಹ ಪಾತ್ರವನ್ನೇ ನಾನು ಬಯಸುತ್ತೇನೆ. ಅದು ನೆಗೆಟಿವ್ ಆಗಿರಲಿ ಅಥವಾ ಪಾಸಿಟಿವ್ ಆಗಿರಲಿ. ಪಾತ್ರದ ಗುಣಕ್ಕಿಂತ ಭಿನ್ನತೆಯನ್ನು ಪ್ರತಿನಿಧಿಸುವುದು ತುಂಬ ಇಷ್ಟ. ಅದರಲ್ಲೂ ತೃತೀಯ ಲಿಂಗಿಯ ಪಾತ್ರವೂ ಸಹಿತ. ಅಂತಹ ಪಾತ್ರವೊಂದು ಸಿನಿಮಾಕ್ಕಾಗಿ ಬಂದಿತ್ತು. ಕೊರೊನಾ ಕಾರಣಕ್ಕೆ ಅದರ ಮಾತುಕತೆ ಅರ್ಧಕ್ಕೆ ನಿಂತಿದೆ. ಇಂತಹ ಸವಾಲಿನ ಪಾತ್ರ ಇಷ್ಟ. ಅದಕ್ಕಾಗಿ ಸ್ವಲ್ಪ ಕೆಲಸ ಮಾಡಬೇಕಾಗುತ್ತದೆ.



■ **ರಾಘವೇಂದ್ರ ಕೆ.**